ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 970
2. ಮಾನ್ಯ ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)
3. ಉತ್ತರಿಸಬೇಕಾದ ದಿನಾಂಕ : 21.12.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಮಾರುಕಟ್ಟೆ ಸುಧಾರಣಾ ನಿಧಿ ಎಂದರೇನು; ಇದನ್ನು ಯಾವ ಯಾವ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಾಗುತ್ತದೆ; (ವಿವರವಾದ ಮಾಹಿತಿ ನೀಡುವುದು).	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 1966ರ ನಿಯಮ 111ರಡಿಯಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಸೌಕರ್ಯಗಳಾದ ಕೃಷಿ ಉತ್ಪನ್ನಗಳ ವರ್ಗೀಕರಣ, ಗುಣಮಟ್ಟ ವಿಶ್ಲೇಷಣೆ, ಆಯ್ದ ಕೃಷಿ ಉತ್ಪನ್ನ ಮಾರಾಟದ ಅವಶ್ಯವಿರುವ ಸೌಲಭ್ಯಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಹಿನ್ನೆಲೆಯಲ್ಲಿ ಕೃಷಿ ಮಾರುಕಟ್ಟೆ ಸುಧಾರಣೆಗಾಗಿ ಮಾರುಕಟ್ಟೆ ಸುಧಾರಣಾ ನಿಧಿಯ (Market Reform Fund)ನ್ನು ಸ್ಥಾಪಿಸಲಾಗಿರುತ್ತದೆ.
ಆ	ಕಳೆದ 3 ವರ್ಷಗಳಿಂದ ಸರ್ಕಾರವು ಈ ನಿಧಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ; ಈ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾಗಿದೆ; (ವರ್ಷವಾರು ವಿವರವಾದ ಮಾಹಿತಿ ನೀಡುವುದು).	ಈ ನಿಧಿಗೆ ಕಳೆದ ಮೂರು ವರ್ಷಗಳಿಂದ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದರೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕ್ರೋಢೀಕೃತವಾಗುವ ಮಾರುಕಟ್ಟೆ ಶುಲ್ಕ ಹಾಗೂ ಲೈಸೆನ್ಸ್ ಶುಲ್ಕದ ಮೇಲೆ 10 ಪೈಸೆಯಷ್ಟು ವಂತಿಕೆಯನ್ನು ಮಂಡಳಿಗೆ ಪಾವತಿಸಲಾಗುತ್ತದೆ. ಕೃಷಿ ಉತ್ಪನ್ನಗಳ ವರ್ಗೀಕರಣ, ಗುಣಮಟ್ಟ ವಿಶ್ಲೇಷಣೆ, ಆಯ್ದ ಕೃಷಿ ಉತ್ಪನ್ನ ಮಾರಾಟದ ಅವಶ್ಯವಿರುವ ಸೌಲಭ್ಯಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳಿಗೆ ಖರ್ಚು ಮಾಡಲು ಅವಕಾಶವಿರುತ್ತದೆ. ಆದರೆ, 2019–20ನೇ ಸಾಲಿನಿಂದ ರಾಜ್ಯದಲ್ಲಿ ಕೋವಿಡ್–19 ವೈರಾಣು ಹರಡುವಿಕೆಯನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಅಸ್ಸೆಯಿಂಗ್ ಕಾರ್ಯ ಹೊರತುಪಡಿಸಿ ಬೇರೆ ಕಾರ್ಯಕ್ರಮಗಳಿಗೆ ಈ ನಿಧಿಯಿಂದ ವೆಚ್ಚ ಮಾಡಿರುವುದಿಲ್ಲ. ಅಸ್ಸೆಯಿಂಗ್ ಕಾರ್ಯಕ್ಕಾಗಿ ಖರ್ಚು ಮಾಡಲಾದ ವರ್ಷವಾರು ಮಾಹಿತಿಯನ್ನು ಉಪ ಪ್ರಶ್ನೆ "ಈ" ರಲ್ಲಿ ನೀಡಲಾಗಿದೆ.
ಇ	ಕೃಷಿ ಉತ್ಪನ್ನಗಳ ಆಸೆಸಿಂಗ್ ಎಂದರೇನು: ಈ ಕಾರ್ಯಗಳಿಗಾಗಿ ಕೃಷಿ ಮಾರುಕಟ್ಟೆ ಇಲಾಖೆಯಡಿ ಎಷ್ಟು ಏಜೆನ್ಸಿಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ; (ಏಜೆನ್ಸಿವಾರು, ವಿಳಾಸವಾರು ಮಾಹಿತಿ ನೀಡುವುದು)	ಕೃಷಿ ಉತ್ಪನ್ನಗಳ ಸಂಯೋಜನೆ ಮತ್ತು ರಾಸಾಯನಿಕ ಗುಣಲಕ್ಷಣಗಳನ್ನು ನಿರ್ಧರಿಸಲು ಉತ್ಪನ್ನದ ಭೌತಿಕ ಮಾದರಿಯನ್ನು ವಿಶ್ಲೇಷಿಸುವ ಪ್ರಕ್ರಿಯೆಯನ್ನು ಅಸ್ಸೆಯಿಂಗ್‌ಯೆಂದು ಕರೆಯಲಾಗುತ್ತದೆ. ಉದಾರಣೆಗೆ, ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ಗುಣವಿಶ್ಲೇಷಣೆ ಮಾಡುವುದರಿಂದ ಉತ್ಪನ್ನದ ತೇವಾಂಶದ ಜೊತೆಗೆ ಪ್ರೋಟಿನ್, ಧಾನ್ಯದತೂಕ, ಫೈಬರ್ ಸಾಮರ್ಥ್ಯ, ಇತ್ಯಾದಿಗಳ ವಿಷಯಗಳನ್ನು ತಿಳಿಯಲು ಸಹಾಯವಾಗುತ್ತದೆ. ಇದರಿಂದ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೂ ಮತ್ತು ಖರೀದಿದಾರರಿಗೂ ಸಹಾಯವಾಗುತ್ತದೆ.

<table>
<tr><td></td><td></td><td>ಈ ಕಾರ್ಯಕ್ಕೆ 2019-20ನೇ ಸಾಲಿನಿಂದ 2021-22ನೇ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅಸ್ಸೆಯಿಂಗ್ ಕಾರ್ಯನಿರ್ವಹಿಸಲು ಟೆಂಡರ್ ಮುಖಾಂತರ ಆಯ್ಕೆಯಾದ ಸಂಸ್ಥೆಗಳ ವಿಳಾಸವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಈ</td><td>ಸದರಿ ಏಜೆನ್ಸಿಗಳಿಗೆ ಕೃಷಿ ಉತ್ಪನ್ನಗಳ ಅಸೆಸಿಂಗ್ ಕಾರ್ಯಗಳಿಗಾಗಿ ಕಳೆದ 3 ವರ್ಷಗಳಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ವರ್ಷವಾರು, ಕಾರ್ಯಕ್ರಮವಾರು ವಿವರವಾದ ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಲಾದ ವಿವರಗಳು.
<table>
<tr><th>ಕ್ರಸಂ</th><th>ವರ್ಷ</th><th>ಪಾವತಿಸಿದ ಮೊತ್ತ ರೂ.ಗಳಲ್ಲಿ</th></tr>
<tr><td></td><td>2019-20</td><td></td></tr>
<tr><td>1</td><td>ಅಸ್ಸೆಯಿಂಗ್ ಕಾರ್ಯಗಳಿಗಾಗಿ ಪಾವತಿಸಲಾದ ಮೊತ್ತ</td><td>38,61,503</td></tr>
<tr><td>2</td><td>ಅಸ್ಸೆಯಿಂಗ್ ಟೆಂಡರ್ ಕರೆದಿರುವುದರ ಟೆಂಡರ್ ಪ್ರಕಟಣೆ ಬಿಲ್ ಪಾವತಿ.</td><td>73,181</td></tr>
<tr><td></td><td>ಒಟ್ಟು ಮೊತ್ತ</td><td>39,34,684</td></tr>
<tr><td></td><td>2020-21</td><td></td></tr>
<tr><td>1</td><td>ಅಸ್ಸೆಯಿಂಗ್ ಕಾರ್ಯಗಳಿಗಾಗಿ ಪಾವತಿಸಲಾದ ಮೊತ್ತ</td><td>1,15,05,926</td></tr>
<tr><td>2</td><td>ಅಸ್ಸೆಯಿಂಗ್ ಟೆಂಡರ್ ಕರೆದಿರುವುದರ ಟೆಂಡರ್ ಪ್ರಕಟಣೆ ಬಿಲ್ ಪಾವತಿ.</td><td>66,570</td></tr>
<tr><td></td><td>ಒಟ್ಟು ಮೊತ್ತ</td><td>1,15,72,496</td></tr>
<tr><td></td><td>2021-22</td><td></td></tr>
<tr><td>1</td><td>ಅಸ್ಸೆಯಿಂಗ್ ಕಾರ್ಯಗಳಿಗಾಗಿ ಪಾವತಿಸಲಾದ ಮೊತ್ತ</td><td>1,35,18,547</td></tr>
<tr><td>2</td><td>ಅಸ್ಸೆಯಿಂಗ್ ಟೆಂಡರ್ ಕರೆದಿರುವುದರ ಟೆಂಡರ್ ಪ್ರಕಟಣೆ ಬಿಲ್ ಪಾವತಿ.</td><td>32,897</td></tr>
<tr><td></td><td>ಒಟ್ಟು ಮೊತ್ತ</td><td>1,35,51,444</td></tr>
</table>
</td></tr>
</table>

ಸಂಖ್ಯೆ: ಸಿಒ 321 ಎಂಆರ್‌ಇ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

Q.NO 970

ಅನುಬಂಧ

2019–20ನೇ ಸಾಲಿನಿಂದ 2021–22ನೇ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅಸ್ಸೆಯಿಂಗ್ ಕಾರ್ಯನಿರ್ವಹಿಸಲು ಟೆಂಡರ್ ಮುಖಾಂತರ ಆಯ್ಕೆಯಾದ ಸಂಸ್ಥೆಗಳ ವಿವರ:

1. **Shree Shubham Logistics Limited:**

   Office No.2I,2J,2E and 2F, 2nd floor,
   Rushabh chambers, plot no 609,
   off. Makwana road, behind J A
   Plastic, Marol Naka, Andheri East,
   Mumbai Suburban, Maharashtra, 400059.

2. **Star Agriwarehousing and Collateral Management Limited**

   Flat No 3A, CKR Residency, 4-7-66/A,
   Nagendra Nagar, Habsiguda, Hyderabad
   500007

3. **Sansaavi Techno Solutions Private Limited**
   No. 2950, 2nd Stage, D Block, MKK Road, Rajajinagar,
   Bangalore 560010

4. **NATIONAL COMMODITIES MANAGEMENT SERVICES LTD**

   National Commodities Management Services Limited (NCML)
   D-164, TTC Industrial Area, Nerul MIDC Navi Mumbai-400706